ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ. ಎಸ್. ರವಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1027

ಉತ್ತರಿಸಬೇಕಾದ ದಿನಾಂಕ : 21.09.2021

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ವ್ಯಾಪ್ತಿಯಲ್ಲಿ ನೋಂದಾಯಿಸಿರುವ ಹಾಗೂ ಕಾರ್ಯನಿರ್ವಹಿಸುತ್ತಿರುವ ಒಟ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳು, ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಬೆಂಗಳೂರು ಹಾಲು ಒಕ್ಕೂಟ(ಬಮೂಲ್) ವ್ಯಾಪ್ತಿಯಲ್ಲಿ ಒಟ್ಟು 2267 ಸಂಘಗಳನ್ನು ನೊಂದಾಯಿಸಿದ್ದು, ಒಟ್ಟು 2227 ಸಂಘಗಳು ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ತಾಲ್ಲೂಕು</th><th>ನೋಂದಾಯಿಸಿರುವ ಒಟ್ಟು ಸಂಘಗಳು</th><th>ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಂಘಗಳು</th></tr>
<tr><td>1</td><td rowspan="4">ಬೆಂಗಳೂರು ನಗರ</td><td>ಆನೇಕಲ್</td><td>169</td><td>160</td></tr>
<tr><td>2</td><td>ಬೆಂಗಳೂರು ಪೂರ್ವ</td><td>70</td><td>66</td></tr>
<tr><td>3</td><td>ಬೆಂಗಳೂರು ಉತ್ತರ</td><td>159</td><td>159</td></tr>
<tr><td>4</td><td>ಬೆಂಗಳೂರು ದಕ್ಷಿಣ</td><td>106</td><td>106</td></tr>
<tr><td>5</td><td rowspan="4">ಬೆಂಗಳೂರು ಗ್ರಾಮಾಂತರ</td><td>ದೇವನಹಳ್ಳಿ</td><td>183</td><td>183</td></tr>
<tr><td>6</td><td>ದೊಡ್ಡಬಳ್ಳಾಪುರ</td><td>245</td><td>238</td></tr>
<tr><td>7</td><td>ಹೊಸಕೋಟೆ</td><td>200</td><td>199</td></tr>
<tr><td>8</td><td>ನೆಲಮಂಗಲ</td><td>183</td><td>181</td></tr>
<tr><td>9</td><td rowspan="4">ರಾಮನಗರ</td><td>ಕನಕಪುರ</td><td>296</td><td>295</td></tr>
<tr><td>10</td><td>ಮಾಗಡಿ</td><td>292</td><td>288</td></tr>
<tr><td>11</td><td>ಚನ್ನಪಟ್ಟಣ</td><td>172</td><td>165</td></tr>
<tr><td>12</td><td>ರಾಮನಗರ</td><td>192</td><td>187</td></tr>
<tr><td></td><td>ಒಟ್ಟು</td><td></td><td>2267</td><td>2227</td></tr>
</table></td></tr>
<tr><td>ಆ</td><td>ತಯಾರಾಗುತ್ತಿರುವ ಉತ್ಪನ್ನಗಳ ವಿವರ, ಪ್ರತಿದಿನ ಮಾರಾಟವಾಗುತ್ತಿರುವ ಉತ್ಪನ್ನಗಳ ವಿವರ, ಉಳಿಕೆ ಉತ್ಪನ್ನವನ್ನು ಮಾರಾಟ ಮಾಡಲು ಕೈಗೊಂಡ ಕ್ರಮಗಳೇನು?</td><td>ಬೆಂಗಳೂರು ಹಾಲು ಒಕ್ಕೂಟದಲ್ಲಿ ವಿವಿಧ ಮಾದರಿಯ ನಂದಿನಿ ಹಾಲು ಮತ್ತು ಉತ್ಪನ್ನಗಳಾದ ಮೊಸರು, ಬೆಣ್ಣೆ, (ಉಪ್ಪು ರಹಿತ & ಉಪ್ಪು ಸಹಿತ), ತುಪ್ಪ, ಪನ್ನೀರ್, ಖೋವಾ, ಕ್ರೀಂ, ಪೇಡಾ, ಮೈಸೂರ್ ಪಾಕ್, ಚೀಸ್, ತೃಪ್ತಿ ಹಾಲು, ಗುಡ್‌ಲೈಫ್ ಹಾಲು, ವ್ಹೇ ಪೌಡರ್, (Whey Powder) ಲಸ್ಸಿ, ಸುವಾಸಿತ ಹಾಲು ಹಾಗೂ ಮಜ್ಜಿಗೆಯನ್ನು ಉತ್ಪಾದಿಸಲಾಗುತ್ತಿದೆ.

ಪ್ರತಿ ದಿನ ಹಾಲು ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆಯನ್ನು ಪಡೆದು, ಬೇಡಿಕೆಗನುಗುಣವಾಗಿ ಸರಬರಾಜು ಮಾಡಲಾಗುವುದು.

ಉಳಿಕೆ ಹಾಲನ್ನು ಕೆನೆರಹಿತ ಪುಡಿಯಾಗಿ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಹೆಚ್ಚಿನ ದರವನ್ನು ನಿರೀಕ್ಷಿಸಬಹುದಾದ ಸಂದರ್ಭದಲ್ಲಿ ಮಾರಾಟ ಮಾಡಲಾಗುವುದು ಹಾಗೂ ಕೆನೆಭರಿತ ಹಾಲನ್ನು ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ ಸರಬರಾಜು ಮಾಡಲಾಗುವುದು.</td></tr>
</table>

ಇ	ರೈತರಿಗೆ ರಾಜ್ಯಾದ್ಯಂತ ಇರುವ ಒಕ್ಕೂಟಗಳು ನೀಡುತ್ತಿರುವ ಹಾಲಿನ ದರದ ವಿವರ ನೀಡುವುದು.	ರೈತರಿಗೆ ರಾಜ್ಯಾದ್ಯಂತ ಇರುವ ಒಕ್ಕೂಟಗಳು ನೀಡುತ್ತಿರುವ ಹಾಲಿನ ದರದ ವಿವರ **ಅನುಬಂಧ**-1ರಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ ಸಿಹಿ 170 ಸಿಸಿಬಿ 2021

ಎಸ್.ಟಿ. ಸೋಮಶೇಖರ್

(ಎಸ್. ಟಿ. ಸೋಮಶೇಖರ್)

ಸಹಕಾರ ಸಚಿವರು

ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಆರ್.ಪ್ರಸನ್ನಕುಮಾರ್ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 957(1046) ಕ್ಕೆ

ಅನುಬಂಧ–3

ಠೇವಣಿದಾರರಿಗೆ ವಂಚಿಸಿ ಸಮಾಪನೆಗೊಂಡಿರುವ ಸೌಹಾರ್ದ/ಸಹಕಾರ ಸಂಘಗಳ ವಿವರ

1. ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋಆಪರೇಟೀವ್ ಲಿ., ಬೆಂಗಳೂರು.
2. ಸೆವೆನ್ ಹಿಲ್ಸ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಾಲೂರು, ಕೋಲಾರ.
3. ಸಿಟಿ ಪತ್ತಿನ ಸಹಕಾರ ಸಂಘ ನಿ., ನ್ಯೂ ಮಂಡಿಪೇಟೆ, ತುಮಕೂರು
4. ದಕ್ಷಿಣ ಕನ್ನಡ .ಕೃಷಿಕರ ಮಾರಾಟ ಸಹಕಾರ ಸಂಘ ನಿ., (ಎಸ್‌ಕೆಎಸಿಎಂಎಸ್) :–
5. ಉದ್ಯಮಶೀಲರ ಸಹಕಾರ ಸಂಘ ನಿ., ಮಂಗಳೂರು :–
6. ವೃದ್ಧಿ ಸೌಹಾರ್ದ ಸಹಕಾರಿ ನಿ., ಮಂಗಳೂರು
7. ಶರ್ಮಹಾನ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಪುತ್ತೂರು :–
8. ದಿ ಬೆಳಗಾವಿ ಲಿಬರಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ.
9. ಶ್ರೀ. ಸಾಯಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ.

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)